"ಮಧುರ ಮಕ್ಕಳೇ - ತಾವು ಸರ್ವ ಆತ್ಮರನ್ನು ಕರ್ಮಬಂಧನದಿಂದ ಮುಕ್ತ ಮಾಡುವಂತಹ ರಕ್ಷಣಾ ಸೈನಿಕರಾಗಿದ್ದೀರಿ (ಮುಕ್ತಸೈನ್ಯ), ತಾವು ಕರ್ಮಬಂಧನದಲ್ಲಿ ಸಿಕ್ಕಿಕೊಳ್ಳಬಾರದು"

ಪ್ರಶ್ನೆ: ಯಾವ ಅಭ್ಯಾಸವನ್ನು ಮಾಡುತ್ತಾ ಇದ್ದಿದ್ದೇ ಆದರೆ ಆತ್ಮ ಬಹಳ-ಬಹಳ ಶಕ್ತಿಶಾಲಿಯಾಗಿಬಿಡುತ್ತದೆ?

ಉತ್ತರ: ಸಮಯ ಸಿಕ್ಕಿದಾಗ ಶರೀರದಿಂದ ಭಿನ್ನರಾಗುವ ಅಭ್ಯಾಸ ಮಾಡಿರಿ. ಭಿನ್ನರಾಗುವುದರಿಂದ ಆತ್ಮದಲ್ಲಿ ಮತ್ತೆ ಶಕ್ತಿಯು ಬರುತ್ತದೆ. ಅದರಲ್ಲಿ ಬಲ ತುಂಬುತ್ತದೆ. ನೀವು ಗುಪ್ತವಾಗಿರುವ ಸೈನಿಕರಾಗಿದ್ದೀರಿ (ಅಂಡರ್ಗ್ರೌಂಡ್ ಮಿಲ್ಟ್ರಿ). ನಿಮಗೆ ಡೈರೆಕ್ಷನ್ ಸಿಗುತ್ತದೆ- ಅಟೆನ್ಶನ್ ಪ್ಲೀಸ್ (ಗಮನ ಕೊಡಿ) ಅರ್ಥಾತ್ ಒಬ್ಬ ತಂದೆಯ ನೆನಪಿನಲ್ಲಿರಿ, ಅಶರೀರಿಗಳಾಗಿರಿ.

ಓಂ ಶಾಂತಿ. ಓಂ ಶಾಂತಿಯ ಅರ್ಥವನ್ನು ತಂದೆಯು ಬಹಳಚೆನ್ನಾಗಿ ತಿಳಿಸಿದ್ದಾರೆ. ಎಲ್ಲಿ ಮಿಲ್ಟ್ರಿಯವರು ನಿಂತಿರುತ್ತಾರೆಯೋ ಅಲ್ಲಿ ಮತ್ತೆ ಹೇಳುತ್ತಾರೆ- ಅಟೆನ್ಶನ್ ಪ್ಲೀಸ್, ಅವರಿಗೆ ಅಟೆನ್ಶನ್ ಎಂದರೆ ಸೈಲೆನ್ಸ್ ಎಂದು ಅರ್ಥವಾಗಿದೆ. ಇಲ್ಲಿಯೂ ಸಹ ನಿಮಗೆ ತಂದೆಯು ಹೇಳುತ್ತಾರೆ- ಅಟೆನ್ಶನ್ ಅರ್ಥಾತ್ ಒಬ್ಬ ತಂದೆಯ ನೆನಪಿನಲ್ಲಿರಿ. ಬಾಯಿಂದ ಹೇಳಲಾಗುತ್ತದೆ ಇಲ್ಲವೆಂದರೆ ವಾಸ್ತವದಲ್ಲಿ ಮಾತನಾಡುವುದರಿಂದ ದೂರವಾಗಬೇಕಾಗುತ್ತದೆ. ಅಟೆನ್ಶನ್ ಕೊಡಿ- ತಂದೆಯ ನೆನಪಿನಲ್ಲಿದ್ದೀರಾ? ತಂದೆಯ ಡೈರೆಕ್ಷನ್ ಅಥವಾ ಶ್ರೀಮತವು ಸಿಗುತ್ತದೆ, ನೀವು ಆತ್ಮವನ್ನು ತಿಳಿದುಕೊಂಡಿದ್ದೀರಿ, ತಂದೆಯನ್ನು ತಿಳಿದುಕೊಂಡಿದ್ದೀರಿ ಅಂದಮೇಲೆ ತಂದೆಯನ್ನು ನೆನಪು ಮಾಡದೇ ವಿಕರ್ಮಾಜೀತ ಅಥವಾ ಸತೋಪ್ರಧಾನ ಪವಿತ್ರರಾಗಲು ಸಾಧ್ಯವಿಲ್ಲ ಮೂಲಮಾತು ಇದೇ ಆಗಿದೆ. ತಂದೆಯು ತಿಳಿಸುತ್ತಾರೆ- ಮಧುರಾತಿ ಮಧುರ ಮುದ್ದಾದ ಮಕ್ಕಳೇ, ತಮ್ಮನ್ನು ಆತ್ಮನೆಂದು ತಿಳಿದು ತಂದೆಯನ್ನು ನೆನಪು ಮಾಡಿ, ಇದೆಲ್ಲವೂ ಈ ಸಮಯದ ಮಾತಾಗಿದೆ ಆದರೆ ಅವರು(ಮಿಲ್ಟ್ರಿಯವರು) ಅಲ್ಲಿಗೆ ತೆಗೆದುಕೊಂಡು ಹೋಗಿದ್ದಾರೆ, ಅವರೂ ಮಿಲ್ಟ್ರಿಯವರಾಗಿದ್ದಾರೆ, ನೀವೂ ಸಹ ಮಿಲ್ಟ್ರಿ ಆಗಿದ್ದೀರಿ. ಅಂಡರ್ಗ್ರೌಂಡ್ ಮಿಲ್ಟ್ರಿಯವರು ಇರುತ್ತಾರಲ್ಲವೆ. ಕಾಣದಂತಾಗುತ್ತಾರೆ ಅರ್ಥಾತ್ ತಂದೆಯ ನೆನಪಿನಲ್ಲಿ ಲೀನವಾಗುತ್ತಾರೆ. ಅವರಿಗೆ ಅಂಡರ್ಗ್ರೌಂಡ್ ಎಂದು ಹೇಳಲಾಗುತ್ತದೆ. ಯಾರಿಗೂ ಗೊತ್ತೇ ಆಗುವುದಿಲ್ಲ ಏಕೆಂದರೆ ನೀವು ಗುಪ್ತವಾಗಿದ್ದೀರಲ್ಲವೆ. ನಿಮ್ಮ ನೆನಪಿನ ಯಾತ್ರೆಯು ಗುಪ್ತವಾಗಿದೆ, ಕೇವಲ ತಂದೆಯು ತಿಳಿಸುತ್ತಾರೆ- ನನ್ನನ್ನು ನೆನಪು ಮಾಡಿ ಏಕೆಂದರೆ ನೆನಪಿನಿಂದ ಇವರೆಲ್ಲರ ಕಲ್ಯಾಣವಾಗುತ್ತದೆ. ಈಗ ನಿಮಗೆ ಅಯ್ಯೋ, ಪಾಪ ಎನ್ನುತ್ತಾ ರಲ್ಲವೆ. ಸ್ವರ್ಗದಲ್ಲಿ ಪಾಪವಿರುವುದೇ ಇಲ್ಲ. ಯಾರು ಬಂಧನದಲ್ಲಿ ಸಿಕ್ಕಿಕೊಂಡಿದ್ದಾರೆಯೋ ಅವರಿಗೆ ಅಯ್ಯೋ ಪಾಪ ಎಂದು ಹೇಳಲಾಗುತ್ತದೆ ಎಂಬುದನ್ನು ನೀವು ತಿಳಿದುಕೊಂಡಿದ್ದೀರಿ. ತಂದೆಯು ತಿಳಿಸಿದ್ದಾರೆ- ನಿಮಗೆ ಲೈಟ್ಹೌಸ್ ಎಂದು ಹೇಳಲಾಗುತ್ತದೆ. ತಂದೆಯನ್ನೂ ಲೈಟ್ಹೌಸ್ ಎಂದು ಹೇಳಲಾಗುತ್ತದೆ. ತಂದೆಯು ಪ್ರತೀಗಳಿಗೆಯೂ ತಿಳಿಸುತ್ತಾರೆ- ಒಂದು ಕಣ್ಣಿನಲ್ಲಿ ಶಾಂತಿಧಾಮ, ಇನ್ನೊಂದು ಕಣ್ಣಿನಲ್ಲಿ ಸುಖಧಾಮವನ್ನು ಇಟ್ಟುಕೊಳ್ಳಿರಿ. ನೀವು ಲೈಟ್ಹೌಸ್ನಂತೆ ಇದ್ದೀರಿ. ಕುಳಿತುಕೊಳ್ಳುತ್ತಾ-ಏಳುತ್ತಾ, ನಡೆದಾಡುತ್ತಾ ಲೈಟ್ ಆಗಿರಿ. ಎಲ್ಲರಿಗೂ ಸುಖಧಾಮ-ಶಾಂತಿಧಾಮದ ಮಾರ್ಗವನ್ನು ತಿಳಿಸುತ್ತಾ ಇರಬೇಕು. ಈ ದುಃಖಧಾಮದಲ್ಲಿ ಎಲ್ಲರ ದೋಣಿಗಳು ಸಿಕ್ಕಿಹಾಕಿಕೊಂಡಿದೆ. ಅಂದಾಗ ಹೇಳಲಾಗುತ್ತದೆ- ಅಂಬಿಗ ನನ್ನ ದೋಣಿಯನ್ನು ಪಾರು ಮಾಡು. ಹೇ, ಅಂಬಿಗ ಎಲ್ಲರ ದೋಣಿಗಳು ಸಿಕ್ಕಿಕೊಂಡಿದೆ, ಅದನ್ನು ಮುಕ್ತ ಮಾಡುವವರು ಯಾರು? ಅವರನ್ನು ಮುಕ್ತ ಮಾಡುವಂತಹ ಸೈನಿಕರು ಯಾರೂ ಇಲ್ಲ, ಆದರೆ ಹೆಸರನ್ನು ಇಟ್ಟಿದ್ದಾರೆ. ವಾಸ್ತವದಲ್ಲಿ ಸಾಲ್ವೇಷನ್ ಆರ್ಮಿ(ಪರಿಹಾರ ದಳ) ನೀವೇ ಆಗಿದ್ದೀರಿ, ಪ್ರತಿಯೊಬ್ಬರನ್ನೂ ನೀವೇ ಮುಕ್ತರನ್ನಾಗಿ ಮಾಡುತ್ತೀರಿ. ಈ 5 ವಿಕಾರಗಳ ಸರಪಳಿಯಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ಆದ್ದರಿಂದ ಹೇಳುತ್ತಾರೆ- ನಮ್ಮನ್ನು ಮುಕ್ತರನ್ನಾಗಿ ಮಾಡು, ಸ್ವತಂತ್ರರನ್ನಾಗಿ ಮಾಡು. ಅಂದಮೇಲೆ ತಂದೆಯು ತಿಳಿಸುತ್ತಾರೆ- ಈ ನೆನಪಿನ ಯಾತ್ರೆಯಿಂದ ನೀವು ಪಾರಾಗುತ್ತೀರಿ. ಈಗಂತು ಎಲ್ಲರೂ ಸಿಕ್ಕಿಹಾಕಿಕೊಂಡಿದ್ದಾರೆ. ತಂದೆಯನ್ನು ತೋಟದ ಮಾಲೀಕನೆಂದು ಹೇಳಲಾಗುತ್ತದೆ. ಎಲ್ಲಾ ಮಾತುಗಳು ಈ ಸಮಯದ್ದೇ ಆಗಿದೆ. ನೀವೆಲ್ಲರೂ ಹೂಗಳಾಗಬೇಕಾಗಿದೆ. ಈಗ ಎಲ್ಲರೂ ಮುಳ್ಳುಗಳಾಗಿದ್ದಾರೆ ಏಕೆಂದರೆ ಎಲ್ಲರೂ ಹಿಂಸಕರಾಗಿದ್ದಾರೆ, ಈಗ ಅಹಿಂಸಕರಾಗಬೇಕು ಮತ್ತು ಪಾವನರಾಗಬೇಕಾಗಿದೆ. ಯಾರು ಧರ್ಮಸ್ಥಾಪನೆಯನ್ನು ಮಾಡುವುದಕ್ಕಾಗಿ ಬರುತ್ತಾರೆಯೋ ಅವರು ಪವಿತ್ರಆತ್ಮರೇ ಬರುತ್ತಾರೆ, ಅವರಂತು ಅಪವಿತ್ರರಾಗಿರಲು ಸಾಧ್ಯವಿಲ್ಲ. ಮೊದಲು ಯಾರೆಲ್ಲರೂ ಬರುತ್ತಾರೆಯೋ ಅವರು ಪವಿತ್ರರಾಗಿರುವ ಕಾರಣದಿಂದ ಆ ಆತ್ಮಕ್ಕೆ ಅಥವಾ ಅವರ ಶರೀರಕ್ಕೆ ದುಃಖವಾಗಲು ಸಾಧ್ಯವಿಲ್ಲ ಏಕೆಂದರೆ ಅವರಿಂದ ಯಾವುದೇ ಪಾಪವಾಗುವುದಿಲ್ಲ. ನಾವೂ ಪವಿತ್ರವಾಗಿದ್ದಾಗ ಯಾವುದೇ ಪಾಪವಾಗುವುದಿಲ್ಲ ಅಂದಮೇಲೆ ಅನ್ಯರದೂ ಆಗುವುದಿಲ್ಲ. ಪ್ರತಿಯೊಂದು ಮಾತಿನಲ್ಲಿಯೂ ವಿಚಾರ ಮಾಡಲಾಗುತ್ತದೆ. ಅಲ್ಲಿಂದ ಆತ್ಮರು ಧರ್ಮಸ್ಥಾಪನೆ ಮಾಡಲು ಬರುತ್ತಾರೆ. ನಂತರದಲ್ಲಿ ಅವರ ವಂಶಾವಳಿಯು ನಡೆಯುತ್ತದೆ. ಸಿಖ್ಖ್ ಧರ್ಮದವರ ವಂಶಾವಳಿಯೂ ಆಗಿದೆ. ಸನ್ಯಾಸಿಗಳ ವಂಶಾವಳಿಯು ನಡೆಯುತ್ತದೆಯೇ? ಅವರು ರಾಜರಾಗುವರೇ? ಸಿಖ್ಖ್ ಧರ್ಮದಲ್ಲಿ ಮಹಾರಾಜ ಮುಂತಾದವರೆಲ್ಲರೂ ಇರುತ್ತಾರೆ, ಅವರು ಯಾವಾಗ ಬರುತ್ತಾರೆಯೋ ಆಗ ಧರ್ಮಸ್ಥಾಪನೆಯನ್ನು ಮಾಡುವುದಕ್ಕಾಗಿ ಹೊಸಆತ್ಮವು ಬರುತ್ತದೆ. ಕ್ರಿಸ್ತನು

ಬಂದು ಕ್ರೈಸ್ತಧರ್ಮವನ್ನು ಸ್ಥಾಪನೆ ಮಾಡಿದ್ದಾನೆ, ಬುದ್ಧನು ಬೌದ್ಧಧರ್ಮವನ್ನು, ಇಬ್ರಾಹಿಂ ಇಸ್ಲಾಂಧರ್ಮವನ್ನು ಸ್ಥಾಪನೆ ಮಾಡಿದರು. ದೇವಿ-ದೇವತಾ ಎನ್ನುವ ಹೆಸರು ಸಿಗುವುದಿಲ್ಲ. ನಿರಾಕಾರ ತಂದೆಯೇ ಬಂದು ದೇವಿ-ದೇವತಾ ಧರ್ಮದ ಸ್ಥಾಪನೆ ಮಾಡುತ್ತಾರೆ. ಅವರು ದೇಹಧಾರಿಯಲ್ಲ, ಉಳಿದ ಬೇರೆಲ್ಲಾ ಧರ್ಮಸ್ಥಾಪಕರಿಗೆ ಅವರದೇ ಆದಂತಹ ದೇಹದ ಹೆಸರಿದೆ ಆದರೆ ಶಿವತಂದೆಯು ದೇಹಧಾರಿಯಲ್ಲ. ವಂಶಾವಳಿಯು ಹೊಸಪ್ರಪಂಚದಲ್ಲಿ ನಡೆಯುತ್ತದೆ ಅಂದಮೇಲೆ ತಂದೆಯು ತಿಳಿಸುತ್ತಾರೆ- ಮಕ್ಕಳೇ, ತಮ್ಮನ್ನು ಆತ್ಮಿಕ ಸೈನಿಕ ದಳದವರೆಂದು ಅವಶ್ಯವಾಗಿ ತಿಳಿಯಿರಿ. ಆ ಮಿಲ್ಟ್ರಿಯ ಕಮ್ಯಾಂಡರ್ ಬರುತ್ತಾರೆ, ಹೇಳುತ್ತಾರೆ- ಅಟೆನ್ಶನ್, ಎಲ್ಲರೂ ಎದ್ದು ನಿಂತುಬಿಡುತ್ತಾರೆ. ಈಗಂತು ಪ್ರತಿಯೊಬ್ಬರೂ ತಮ್ಮ-ತಮ್ಮ ಗುರುಗಳನ್ನು ನೆನಪು ಮಾಡುತ್ತಾರೆ ಅಥವಾ ಶಾಂತಿಯನ್ನು ನೆನಪು ಮಾಡುತ್ತಾರೆ ಆದರೆ ಅದು ಅಸತ್ಯವಾದ ಶಾಂತಿಯಾಗಿದೆ. ನೀವು ತಿಳಿದಿದ್ದೀರಿ- ನಾವು ಆತ್ಮರಾಗಿದ್ದೇವೆ, ನಮ್ಮ ಧರ್ಮವೇ ಶಾಂತಿಯಾಗಿದೆ. ಅಂದಮೇಲೆ ಯಾರನ್ನು ನೆನಪು ಮಾಡಬೇಕಾಗಿದೆ! ಈಗ ನಿಮಗೆ ಜ್ಞಾನವು ಸಿಕ್ಕಿದೆ. ಜ್ಞಾನಸಹಿತವಾಗಿ ತಂದೆಯನ್ನು ನೆನಪು ಮಾಡುವುದರಿಂದ ಪಾಪವು ಕತ್ತರಿಸಿಹೋಗುತ್ತದೆ. ಈ ಜ್ಞಾನವು ಮತ್ತ್ಯಾರಲ್ಲಿಯೂ ಇಲ್ಲ. ಇದನ್ನು ಮನುಷ್ಯರು ತಿಳಿಯುತ್ತಾರೆಯೇ- ನಾವು ಆತ್ಮ ಶಾಂತಸ್ವರೂಪವಾಗಿದ್ದೇವೆ, ನಾವು ಶರೀರದಿಂದ ಭಿನ್ನವಾಗಿ ಕುಳಿತುಕೊಳ್ಳಬೇಕು. ಈಗ ನಿಮಗೆ ಈ ಶಕ್ತಿಯು ಸಿಗುತ್ತದೆ, ಅದರಿಂದ ತಮ್ಮನ್ನು ತಾವು ಆತ್ಮವೆಂದು ತಿಳಿದುಕೊಂಡು ತಂದೆಯ ನೆನಪಿನಲ್ಲಿ ಕುಳಿತುಕೊಳ್ಳುತ್ತೀರಿ. ತಂದೆಯು ತಿಳಿಸುತ್ತಾರೆ- ಹೀಗೆ ತಮ್ಮನ್ನು ಆತ್ಮನೆಂದು ತಿಳಿದು ಭಿನ್ನವಾಗಿದ್ದು ಕುಳಿತುಕೊಳ್ಳಬೇಕು.

ನೀವು ತಿಳಿದಿದ್ದೀರಿ- ನಾವಾತ್ಮರು ಈಗ ಹಿಂತಿರುಗಿ ಮನೆಗೆ ಹೋಗಬೇಕಾಗಿದೆ, ನಾವು ಅಲ್ಲಿರುವವರಾಗಿದ್ದೇವೆ. ಇಷ್ಟು ದಿನಗಳು ಮನೆಯನ್ನು ಮರೆತುಹೋಗುತ್ತಿದ್ದೆವು, ನಾವು ಮನೆಗೆ ಹೋಗಬೇಕೆಂದು ಮತ್ತ್ಯಾರೂ ಸಹ ತಿಳಿಯಲು ಸಾಧ್ಯವಿಲ್ಲ. ಪತಿತ ಆತ್ಮವಂತು ಹಿಂತಿರುಗಿ ಹೋಗಲು ಸಾಧ್ಯವಿಲ್ಲ. ಯಾರನ್ನು ನೆನಪು ಮಾಡಬೇಕೆಂದು ತಿಳಿಸುವವರೂ ಸಹ ಯಾರೂ ಇಲ್ಲ. ತಂದೆಯು ತಿಳಿಸುತ್ತಾರೆ- ಒಬ್ಬರನ್ನೇ ನೆನಪು ಮಾಡಬೇಕಾಗಿದೆ. ಬೇರೆ ಯಾರನ್ನೋ ನೆನಪು ಮಾಡುವುದರಿಂದ ಲಾಭವೇನಿದೆ! ತಿಳಿಯಿರಿ- ಭಕ್ತಿಮಾರ್ಗದಲ್ಲಿ ಶಿವ-ಶಿವ ಎಂದು ಹೇಳುತ್ತಾ ಇರುತ್ತಾರೆ, ಇದರಿಂದ ಏನಾಗುತ್ತದೆ ಎಂದು ಯಾರೂ ತಿಳಿದುಕೊಂಡಿಲ್ಲ. ಶಿವನನ್ನು ನೆನಪು ಮಾಡುವುದರಿಂದ ಪಾಪಗಳು ತುಂಡಾಗುತ್ತವೆ ಎಂದೂ ಸಹ ಗೊತ್ತಿಲ್ಲ, ಕೇವಲ ಧ್ವನಿಯಷ್ಟೇ ಕೇಳಲ್ಪಡುತ್ತದೆ. ಈ ಎಲ್ಲಾ ಮಾತುಗಳಿಂದ ಯಾವುದೇ ಲಾಭವಿಲ್ಲ. ಬಾಬಾರವರಂತು(ಬ್ರಹ್ಮಾ) ಎಲ್ಲಾ ಗುರುಗಳೊಂದಿನ ಅನುಭವಿಯಲ್ಲವೆ.

ತಂದೆಯು ತಿಳಿಸಿದ್ದಾರಲ್ಲವೆ- ಹೇ ಅರ್ಜುನ, ಇದೆಲ್ಲವನ್ನೂ ಬಿಟ್ಟುಬಿಡು..... ಸದ್ಗುರು ಸಿಕ್ಕಿದರೆಂದರೆ ಇವರೆಲ್ಲರ ಅವಶ್ಯಕತೆಯಿಲ್ಲ. ಸದ್ಗುರು ಉದ್ಧಾರ ಮಾಡುತ್ತಾರೆ. ತಂದೆಯು ತಿಳಿಸುತ್ತಾರೆ- ನಾನು ನಿಮ್ಮನ್ನು ಆಸುರೀ ಪ್ರಪಂಚದಿಂದ ದೂರ ಕರೆದುಕೊಂಡು ಹೋಗುತ್ತೇನೆ. ವಿಷದ ಸಾಗರದಿಂದ ದೂರ ಹೋಗಬೇಕಾಗಿದೆ. ಇವೆಲ್ಲಾ ಮಾತುಗಳನ್ನು ತಿಳಿದುಕೊಳ್ಳಬೇಕಾಗಿದೆ. ಅಂಬಿಗನಂತು ದೋಣಿ ನಡೆಸುವವನಾಗಿರುತ್ತಾನೆ ಆದರೆ ಇದು ಅರ್ಥಮಾಡಿಕೊಳ್ಳುವ ಹೆಸರಾಗಿದೆ. ಅವರಿಗೆ ಪ್ರಾಣೇಶ್ವರ ತಂದೆ ಅರ್ಥಾತ್ ಪ್ರಾಣದಾನ ಮಾಡುವಂತಹ ತಂದೆಯೆಂದು ಹೇಳಲಾಗುತ್ತದೆ, ಅವರ ಅಮರರನ್ನಾಗಿ ಮಾಡುತ್ತಾರೆ. ಪ್ರಾಣವೆಂದು ಆತ್ಮಕ್ಕೆ ಹೇಳಲಾಗುತ್ತದೆ, ಆತ್ಮವು ಹೊರಹೋಯಿತೆಂದರೆ ಹೇಳುತ್ತಾರೆ - ಪ್ರಾಣ ಹೋಯಿತು. ಆತ್ಮವು ಇದ್ದಿದ್ದೇ ಆದರೆ ಶರೀರವು ಆರೋಗ್ಯವಾಗಿರುತ್ತದೆ. ಆತ್ಮವಿಲ್ಲವೆಂದರೆ ಶರೀರದಿಂದ ದುರ್ಗಂಧ ಬರುತ್ತದೆ. ಆನಂತರ ಇದನ್ನು ಇಟ್ಟುಕೊಂಡು ಏನು ಮಾಡುವರು? ಪ್ರಾಣಿಗಳೂ ಸಹ ಈ ರೀತಿ ಮಾಡುವುದಿಲ್ಲ. ಕೇವಲ ಮಂಗ ಮರಿ ಸತ್ತುಹೋಗಿದ್ದರೂ ಸಹ, ದುರ್ಗಂಧವು ಬರುತ್ತಿದ್ದರೂ ಸಹ ಶವವನ್ನು ಬಿಡುವುದೇ ಇಲ್ಲ. ಅದನ್ನು ಹೊತ್ತುಕೊಂಡು ತಿರುಗುತ್ತಿರುತ್ತದೆ. ಅದಂತು ಪ್ರಾಣಿಯಾಗಿದೆ, ನೀವು ಮನುಷ್ಯರಲ್ಲವೆ. ಶರೀರಬಿಟ್ಟಾಗ ಹೇಳುತ್ತಾರೆ- ಅದನ್ನು ಮೊದಲು ಹೊರಗೆ ಹಾಕಿರಿ. ಮನುಷ್ಯರು ಹೇಳುತ್ತಾರೆ- ಸ್ವರ್ಗಸ್ಥರಾದರು. ಯಾವಾಗ ಶವವನ್ನು ಎತ್ತುವರು, ಆಗ ಮೊದಲು ಕಾಲುಗಳನ್ನು ಸ್ಮಶಾನದ ಕಡೆಗೆ ಇಡುತ್ತಾರೆ, ನಂತರ ಯಾವಾಗ ಒಳಗೆ ಹೋಗುತ್ತಾರೆಯೋ ಆಗ ಪೂಜೆ ಇತ್ಯಾದಿಗಳನ್ನು ಮಾಡಿದ ನಂತರ ಸ್ವರ್ಗಸ್ಥರಾದರು ಎಂದು ತಿಳಿಯುತ್ತಾರೆ. ತಲೆಯನ್ನು ಸ್ಮಶಾನದ ಕಡೆ ತಿರುಗಿಸುತ್ತಾರೆ. ನೀವು ಕೃಷ್ಣನನ್ನೂ ಸಹ ಯಥಾರ್ಥವಾಗಿ ತೋರಿಸಿದ್ದೀರಿ- ನರಕವನ್ನು ಕಾಲಿನಿಂದ ಒದೆಯುತ್ತಿದ್ದಾನೆ. ಕೃಷ್ಣನ ಶರೀರವಂತು ಇದಲ್ಲ, ಅವರ ಹೆಸರು-ರೂಪವಂತು ಬದಲಾಗುತ್ತದೆ. ಇಷ್ಟೆಲ್ಲಾ ಮಾತುಗಳನ್ನು ತಂದೆಯೇ ತಿಳಿಸುತ್ತಾರೆ, ಆದರೂ ಮತ್ತೆ ಹೇಳುತ್ತಾರೆ- ಮನ್ಮನಾಭವ.

ಇಲ್ಲಿಗೆ ಬಂದು ಯಾವಾಗ ಕುಳಿತುಕೊಳ್ಳುವಿರೋ ಆಗ ಗಮನ ಕೊಡಿ. ಬುದ್ಧಿಯು ತಂದೆಯೊಂದಿಗೆ ಇರಬೇಕು. ನಿಮ್ಮ ಈ ಗಮನವು ಸದಾಕಾಲವಿರಲಿ. ಎಲ್ಲಿಯವರೆಗೆ ಬದುಕಿರುತ್ತೀರಿ ಅಲ್ಲಿಯವರೆಗೆ ತಂದೆಯ ನೆನಪನ್ನು ಮಾಡಬೇಕಾಗಿದೆ. ನೆನಪಿನಿಂದಲೆ ಪಾಪವು ತುಂಡಾಗುತ್ತದೆ. ನೆನಪೇ ಮಾಡಲಿಲ್ಲವೆಂದರೆ ಪಾಪವು ಹೇಗೆ ತುಂಡಾಗುತ್ತದೆ? ತಂದೆಯನ್ನು ನೆನಪು ಮಾಡಬೇಕು, ನೆನಪಿನಲ್ಲಿ ಕಣ್ಣುಗಳನ್ನೆಂದೂ ಮುಚ್ಚಬಾರದು. ಸನ್ಯಾಸಿಗಳು ಕಣ್ಣುಗಳನ್ನು ಮುಚ್ಚಿ ಕುಳಿತುಕೊಳ್ಳುತ್ತಾರೆ. ಕೆಲವರಂತು ಸ್ತ್ರೀಯ ಮುಖವನ್ನೂ ನೋಡುವುದಿಲ್ಲ, ಪಟ್ಟಿಯನ್ನು ಕಣ್ಣಿಗೆ ಕಟ್ಟಿ ಕುಳಿತುಕೊಳ್ಳುತ್ತಾರೆ. ನೀವಿಲ್ಲಿ ಕುಳಿತುಕೊಳ್ಳುತ್ತೀರೆಂದರೆ ರಚೈತ ಮತ್ತು ರಚನೆಯ ಆದಿ-ಮಧ್ಯ-ಅಂತ್ಯದ ಸ್ವದರ್ಶನ ಚಕ್ರವನ್ನು ತಿರುಗಿಸಬೇಕಾಗಿದೆ. ನೀವೆಲ್ಲರೂ ಲೈಟ್ಹೌಸ್ ಆಗಿದ್ದೀರಲ್ಲವೆ. ಇದು ದುಃಖಧಾಮವಾಗಿದೆ, ಒಂದು ಕಣ್ಣಿನಲ್ಲಿ ಶಾಂತಿಧಾಮ, ಇನ್ನೊಂದು ಕಣ್ಣಿನಲ್ಲಿ

ಸುಖಧಾಮ. ಕುಳಿತುಕೊಳ್ಳುತ್ತಾ-ಏಳುತ್ತಾ ತಮ್ಮನ್ನು ಲೈಟ್ಹೌಸ್ ಎಂದು ತಿಳಿದುಕೊಳ್ಳಿ. ಬಾಬಾರವರು ಭಿನ್ನ-ಭಿನ್ನ ರೀತಿಯಿಂದ ತಿಳಿಸುತ್ತಾರೆ. ನೀವು ನಿಮ್ಮ ಸಂಭಾಲನೆ ಮಾಡಿಕೊಳ್ಳುತ್ತೀರಿ. ಲೈಟ್ಹೌಸ್ ಆಗುವುದರಿಂದ ತಮ್ಮ ಕಲ್ಯಾಣವಾಗುತ್ತದೆ. ತಂದೆಯನ್ನು ಅವಶ್ಯವಾಗಿ ನೆನಪು ಮಾಡಬೇಕಾಗಿದೆ, ತಿಳಿಯುವವರಂತು ಬಹಳಷ್ಟು ಸಿಗುತ್ತಾರೆ, ಅವರಂತು ಒಬ್ಬರಿಗೊಬ್ಬರು ರಾಮ-ರಾಮ ಎಂದು ಹೇಳುತ್ತಿರುತ್ತಾರೆ. ಅವರಿಗೆ ತಿಳಿಸಬೇಕು- ಅದು ಶಾಂತಿಧಾಮ ಮತ್ತು ಸುಖಧಾಮವಾಗಿದೆ. ಇದು ತಮಗೆ ಗೊತ್ತಿದೆಯೇ? ನೀವು ಶಾಂತಿಧಾಮ-ಸುಖಧಾಮದಲ್ಲಿ ಹೋಗಲು ಬಯಸುತ್ತೀರಾ! ಈ ಮೂರುಚಿತ್ರಗಳನ್ನು ತಿಳಿಸುವುದು ಬಹಳ ಸಹಜವಾಗಿದೆ. ಲೈಟ್ಹೌಸ್ ಸಹ ಸೂಚನೆ ಕೊಡುತ್ತದೆ. ಇದು ದೋಣಿಯಾಗಿದೆ(ಜೀವನ), ಅದು ರಾವಣನ ಜೈಲಿನಲ್ಲಿ ಸಿಕ್ಕಿಹಾಕಿಕೊಂಡಿದೆ. ಮನುಷ್ಯರು ಮನುಷ್ಯರನ್ನು ಮುಕ್ತರನ್ನಾಗಿ ಮಾಡಲು ಸಾಧ್ಯವಿಲ್ಲ. ಅದೆಲ್ಲವೂ ಅಲ್ಪಕಾಲದ ಮಾತುಗಳಾಗಿವೆ. ಇದು ಬೇಹದ್ದಿನ ಮಾತಾಗಿದೆ. ಅವರದು ಸಮಾಜ ಸೇವೆಯೂ ಅಲ್ಲ, ವಾಸ್ತವದಲ್ಲಿ ಎಲ್ಲರ ದೋಣಿಯನ್ನು ಪಾರು ಮಾಡುವುದು ಸತ್ಯಸೇವೆಯಾಗಿದೆ. ಮನುಷ್ಯರ ಯಾವ ಸೇವೆಯನ್ನು ಮಾಡಬೇಕೆಂದು ನಿಮ್ಮೆಲ್ಲರ ಬುದ್ಧಿಯಲ್ಲಿದೆ.

ಮೊದಲು ತಿಳಿಸಬೇಕಾಗಿದೆ- ತಾವು ಮುಕ್ತಿಧಾಮಕ್ಕೆ ಹೋಗುವುದಕ್ಕಾಗಿ, ತಂದೆಯನ್ನು ಮಿಲನ ಮಾಡುವುದಕ್ಕಾಗಿ ಗುರುಗಳನ್ನು ಮಾಡಿಕೊಳ್ಳುತ್ತೀರಿ ಆದರೆ ಯಾರೂ ಸಿಗುವುದಿಲ್ಲ. ಮಿಲನ ಮಾಡುವ ದಾರಿಯನ್ನಂತು ತಂದೆಯೇ ತಿಳಿಸುತ್ತಾರೆ. ಈ ಶಾಸ್ತ್ರ ಮುಂತಾದವನ್ನು ಓದುವುದರಿಂದ ಭಗವಂತನು ಸಿಗುತ್ತಾರೆ, ಇದರಲ್ಲಿ ನಿಶ್ಚಯವಿದ್ದರೆ ಕೊನೆಗೆ ಒಂದಲ್ಲ ಒಂದುರೂಪದಲ್ಲಿ ಸಿಗುತ್ತಾರೆಂದು ಅವರು ತಿಳಿಯುತ್ತಾರೆ. ಯಾವಾಗ ಸಿಗುತ್ತಾರೆ ಎನ್ನುವುದನ್ನಂತು ತಂದೆಯು ನಿಮಗೆ ತಿಳಿಸಿದ್ದಾರೆ. ತಾವು ಚಿತ್ರದಲ್ಲಿ ತೋರಿಸಿದ್ದೀರಿ- ಒಬ್ಬನನ್ನೇ ನೆನಪು ಮಾಡಿರಿ. ಯಾರೆಲ್ಲಾ ಧರ್ಮಸ್ಥಾಪಕರಿದ್ದಾರೆಯೋ ಅವರೂ ಸಹ ಸೂಚನೆ(ಬೆರಳಿನ ಸನ್ನೆ) ಮೇಲೆ ತೋರಿಸುತ್ತಾರೆ ಏಕೆಂದರೆ ನೀವು ಶಿಕ್ಷಣ ಕೊಡುತ್ತೀರಿ, ಅವರು ಈ ರೀತಿ ಸೂಚನೆ ಕೊಡುತ್ತಾರೆ. ಸಾಹೇಬನನ್ನು ಜಪಿಸಿ ಏಕೆಂದರೆ ಅವರು ತಂದೆಯಾಗಿದ್ದಾರೆ ಎಂದು ಸೂಚಿಸುತ್ತಾರೆ. ಅಶರೀರಿಯಾಗುವ ಶಿಕ್ಷಣವಂತು ಯಾರಿಗೂ ಗೊತ್ತಿಲ್ಲ. ನೀವು ಹೇಳುತ್ತೀರಿ- ಶಿವತಂದೆಯನ್ನು ನೆನಪು ಮಾಡಿರಿ. ಅವರೆಲ್ಲರೂ ಶಿವನ ಮಂದಿರಕ್ಕೆ ಹೋಗುತ್ತಾರೆ ಅಂದಾಗ ಶಿವನನ್ನು ಬಾಬಾ ಎಂದು ಹೇಳುವ ಅಭ್ಯಾಸವಾಗಿಬಿಡುತ್ತದೆ. ಮತ್ತ್ಯಾರನ್ನೂ ಬಾಬಾ ಎಂದು ಹೇಳುವುದಿಲ್ಲ. ಅವರು ನಿರಾಕಾರನಂತೂ ಅಲ್ಲ, ಶರೀರಧಾರಿಯಾಗಿದ್ದಾರೆ. ಶಿವನಂತು ನಿರಾಕಾರನಾಗಿದ್ದಾರೆ. ಸತ್ಯಬಾಬಾ ಎಲ್ಲರ ಬಾಬಾ(ತಂದೆ) ಆಗಿದ್ದಾರೆ. ಎಲ್ಲಾ ಆತ್ಮರೂ ಸಹ ಅಶರೀರಿಯಾಗಿದ್ದಾರೆ.

ನೀವು ಮಕ್ಕಳು ಯಾವಾಗ ಇಲ್ಲಿ ಕುಳಿತುಕೊಳ್ಳುವಾಗ ಲಗನ್ನಿನಲ್ಲಿ ಕುಳಿತುಕೊಳ್ಳಬೇಕು. ನಾವು ಮೊದಲು ಹೇಗೆ ಸಿಕ್ಕಿಹಾಕಿಕೊಂಡೆವು ಎಂದು ನೀವು ತಿಳಿದುಕೊಂಡಿದ್ದೀರಿ. ಈಗ ತಂದೆಯು ಬಂದು ದಾರಿಯನ್ನು ತಿಳಿಸಿದ್ದಾರೆ, ಉಳಿದವರೆಲ್ಲರೂ ಸಿಕ್ಕಿಹಾಕಿಕೊಂಡಿದ್ದಾರೆ, ಬಿಡಿಸಿಕೊಳ್ಳಲು ಆಗುತ್ತಿಲ್ಲ. ಶಿಕ್ಷೆಯನ್ನು ಭೋಗಿಸುತ್ತಾ ಕಡಿಮೆ ರೊಟ್ಟಿಯನ್ನು(ಪದವಿ) ಪಡೆಯಬೇಕೇ! ಬಹಳ ಶಿಕ್ಷೆಯನ್ನು ಅನುಭವಿಸುತ್ತಾರೆಂದರೆ ಪದವಿಭ್ರಷ್ಟರಾಗಿಬಿಡುತ್ತಾರೆ, ಕಡಿಮೆ ಪದವಿಯು ಸಿಗುತ್ತದೆ. ಸ್ವಲ್ಪ ಶಿಕ್ಷೆಯೆಂದರೆ ಚೆನ್ನಾಗಿರುವ ಪದವಿಯೇ ಸಿಗುತ್ತದೆ. ಇದು ಮುಳ್ಳುಗಳ ಕಾಡಾಗಿದೆ, ಎಲ್ಲರೂ ಸಹ ಪರಸ್ಪರದಲ್ಲಿ ಮುಳ್ಳುಗಳನ್ನು ಚುಚ್ಚುತ್ತಿರುತ್ತಾರೆ. ಸ್ವರ್ಗವನ್ನು ಅಲ್ಲಾನ ಉದ್ಯಾನವನವೆಂದು ಹೇಳಲಾಗುತ್ತದೆ. ಕ್ರಿಶ್ಚಿಯನ್ನರೂ ಸಹ ಸ್ವರ್ಗವಿತ್ತು ಎಂದು ಹೇಳುತ್ತಾರೆ. ಕೆಲವೊಮ್ಮೆ ಸಾಕ್ಷಾತ್ಕಾರವೂ ಆಗಿರಬಹುದು. ಈ ಧರ್ಮದಲ್ಲಿ ಯಾರಿರುತ್ತಾರೆಯೋ ಅವರು ಮತ್ತೆ ಇದೇ ಧರ್ಮದಲ್ಲಿ ಬರುವ ಸಾಧ್ಯತೆಯಿದೆ. ಉಳಿದಂತೆ ಕೇವಲ ನೋಡುವುದರಿಂದ ಏನಾಗುವುದು! ಸಾಕ್ಷಾತ್ಕಾರದಿಂದ ಯಾರೂ ಸಹ ಹೋಗಲು ಸಾಧ್ಯವಿಲ್ಲ. ಯಾವಾಗ ತಂದೆಯನ್ನು ಅರ್ಥ ಮಾಡಿಕೊಳ್ಳುವರು ಮತ್ತು ಜ್ಞಾನವನ್ನು ಪಡೆಯುತ್ತಾರೆಯೋ ಆಗಷ್ಟೇ ಬರಲು ಸಾಧ್ಯವಿದೆ. ಎಲ್ಲರೂ ಬರುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ದೇವತೆಗಳಂತು ಬಹಳ ಕಡಿಮೆಯಿರುತ್ತಾರೆ, ಈಗ ಇಷ್ಟೊಂದುಮಂದಿ ಹಿಂದೂಗಳಿದ್ದಾರೆ. ಮೂಲತಃ ದೇವತೆಗಳೇ ಇದ್ದರಲ್ಲವೆ ಆದರೆ ಅವರು ಪಾವನವಾಗಿದ್ದರು, ಇವರು ಪತಿತರಾಗಿಬಿಟ್ಟಿದ್ದಾರೆ. ಪತಿತರನ್ನು ದೇವತೆಗಳೆಂದು ಹೇಳುವುದು ಶೋಭಿಸುವುದಿಲ್ಲ. ಈ ಒಂದುಧರ್ಮವೇ ಧರ್ಮಭ್ರಷ್ಟ, ಕರ್ಮಭ್ರಷ್ಟವೆಂದು ಹೇಳಲಾಗುತ್ತದೆ. ಆದಿಸನಾತನ ಹಿಂದೂಧರ್ಮವೆಂದು ಹೇಳುತ್ತಾರೆ. ದೇವತಾಧರ್ಮದ ಪದವನ್ನೇ ತೆಗೆದುಬಿಡುತ್ತಾರೆ.

ನಾವು ಮಕ್ಕಳ ಪ್ರಿಯಾತಿಪ್ರಿಯವಾದ ತಂದೆಯಾಗಿದ್ದಾರೆ. ಅವರು ನಮ್ಮನ್ನು ಹೇಗಿದ್ದವರನ್ನು ಹೇಗೆ ಮಾಡಿಬಿಡುತ್ತಾರೆ! ತಂದೆಯು ಹೇಗೆ ಬರುತ್ತಾರೆಂದು ನೀವು ತಿಳಿಸಬಹುದು. ಯಾವಾಗ ದೇವತೆಗಳ ಪಾದಗಳು ಹಳೆಯ ತಮೋಪ್ರಧಾನ ಸೃಷ್ಟಿಯಲ್ಲಿ ಇಡುವುದೇ ಇಲ್ಲವೆಂದರೆ ತಂದೆಯು ಹೇಗೆ ಬರುತ್ತಾರೆ? ತಂದೆಯಂತು ನಿರಾಕಾರನಾಗಿದ್ದಾರೆ, ಅವರಿಗಂತು ಪಾದವೇ ಇಲ್ಲ. ಆದ್ದರಿಂದ ಬ್ರಹ್ಮಾರವರಲ್ಲಿ ಪ್ರವೇಶ ಮಾಡುತ್ತಾರೆ.

ಈಗ ನೀವು ಮಕ್ಕಳು ಈಶ್ವರೀಯ ಪ್ರಪಂಚದಲ್ಲಿ ಕುಳಿತಿದ್ದೀರಿ. ಅವರೆಲ್ಲರೂ ಸಹ ಅಸುರೀ ಪ್ರಪಂಚದಲ್ಲಿ ಕುಳಿತಿದ್ದಾರೆ. ಇದು ಬಹಳ ಚಿಕ್ಕದಾದ ಸಂಗಮಯುಗವಾಗಿದೆ. ನೀವು ತಿಳಿಯುತ್ತೀರಿ- ನಾವೀಗ ದೈವೀ ಪ್ರಪಂಚದಲ್ಲಿಯೂ ಇಲ್ಲ, ಆಸುರೀ ಪ್ರಪಂಚದಲ್ಲಿಯೂ ಇಲ್ಲ. ನಾವೀಗ ಈಶ್ವರೀಯ ಪ್ರಪಂಚದಲ್ಲಿದ್ದೇವೆ. ತಂದೆಯು ನಮ್ಮೆಲ್ಲರನ್ನೂ ಮನೆಗೆ ಕರೆದುಕೊಂಡು ಹೋಗುವುದಕ್ಕಾಗಿ ಬಂದಿದ್ದಾರೆ. ತಂದೆಯು ತಿಳಿಸುತ್ತಾರೆ- ಅದು ನನ್ನ ಮನೆಯಾಗಿದೆ. ನಿಮಗಾಗಿ ನಾನು ನನ್ನ ಮನೆಯನ್ನು ಬಿಟ್ಟು ಬರುತ್ತೇನೆ. ಭಾರತವು ಸುಖಧಾಮವಾಗುತ್ತದೆ ಅಂದಮೇಲೆ ಅಲ್ಲಿ ಮತ್ತೇಕೆ ಬರಲಿ? ನಾನು ವಿಶ್ವದ ಮಾಲೀಕನಾಗುವುದಿಲ್ಲ,

ನೀವೇ ಆಗುತ್ತೀರಿ. ನಾನು ಬ್ರಹ್ಮಾಂಡದ ಮಾಲೀಕನಾಗುತ್ತೇವೆ. ಬ್ರಹ್ಮಾಂಡಕ್ಕೆ ಎಲ್ಲರೂ ಬರುತ್ತಾರೆ. ಈಗಲೂ ಸಹ ಅಲ್ಲಿ ಮಾಲೀಕನಾಗಿ ಕುಳಿತಿದ್ದಾರೆ. ಉಳಿದಂತೆ ಮತ್ಯಾರು ಬರುತ್ತಾರೆಯೋ ಅವರು ಬರುತ್ತಾರೆ ಆದರೆ ಅವರು ಬಂದು ವಿಶ್ವದ ಮಾಲೀಕರಾಗುವುದಿಲ್ಲ. ಯಾರೇ ಒಳ್ಳೆಯ ವಿದ್ಯಾರ್ಥಿಯು ಬರುತ್ತಾರೆಂದರೆ ಸ್ಕಾಲರ್ಶಿಪ್ ತೆಗೆದುಕೊಳ್ಳುತ್ತಾರೆ. ಇಲ್ಲಿ ವಿಚಿತ್ರವೇನೆಂದರೆ- ನಾವು ಪವಿತ್ರರಾಗಿರುತ್ತೇವೆ ನಂತರ ಅಪವಿತ್ರರಾಗುತ್ತೇವೆ ಎನ್ನುವವರನ್ನು ಇಲ್ಲಿಗೆ ಕರೆದುಕೊಂಡು ಬರಬಾರದು. ಆದ್ದರಿಂದ ಬ್ರಾಹ್ಮಣಿಯರ ಕಾರ್ಯವಾಗಿದೆ- ಇಂತಿಂತಹವರನ್ನು ಪರಿಶೀಲನೆ ಮಾಡಿ ಕರೆದುಕೊಂಡು ಬರಬೇಕು. ನೀವು ತಿಳಿದುಕೊಂಡಿದ್ದೀರಿ- ಆತ್ಮವು ಶರೀರವನ್ನು ಧಾರಣೆ ಮಾಡಿ ಪಾತ್ರವನ್ನಭಿನಯಿಸುತ್ತದೆ, ಅದಕ್ಕೆ ಅವಿನಾಶಿ ಪಾತ್ರವು ಸಿಕ್ಕಿದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತ ಬಾಪ್ದಾದಾರವರ ನೆನಪು-ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಲೈಟ್ಹೌಸ್ ಆಗಿದ್ದು ಎಲ್ಲರಿಗೂ ಶಾಂತಿಧಾಮ, ಸುಖಧಾಮದ ಮಾರ್ಗವನ್ನು ತೋರಿಸಬೇಕಾಗಿದೆ. ಎಲ್ಲರ ದೋಣಿಗಳನ್ನು ದುಃಖಧಾಮದಿಂದ ಹೊರತೆಗೆಯುವಂತಹ ಸೇವೆ ಮಾಡಬೇಕಾಗಿದೆ. ತಮ್ಮ ಕಲ್ಯಾಣವನ್ನು ಮಾಡಿಕೊಳ್ಳಬೇಕಾಗಿದೆ.

2. ತಮ್ಮ ಶಾಂತ ಸ್ವರೂಪ ಸ್ಥಿತಿಯಲ್ಲಿ ಸ್ಥಿತರಾಗಿದ್ದು, ಶರೀರದಿಂದ ಭಿನ್ನರಾಗುವ ಅಭ್ಯಾಸವನ್ನು ಮಾಡಬೇಕಾಗಿದೆ. ನೆನಪು ಮಾಡುವಾಗ ಕಣ್ಣುಗಳನ್ನು ತೆರೆದು ಕುಳಿತುಕೊಳ್ಳಬೇಕಾಗಿದೆ. ಬುದ್ಧಿಯಿಂದ ರಚೈತ ಮತ್ತು ರಚನೆಯ ಸ್ಮರಣೆ ಮಾಡಬೇಕಾಗಿದೆ.

ವರದಾನ: ತಮ್ಮ ಸಂಕಲ್ಪಗಳನ್ನು ಶುದ್ಧ, ಜ್ಞಾನ ಸ್ವರೂಪ ಮತ್ತು ಶಕ್ತಿ ಸ್ವರೂಪ ಮಾಡಿಕೊಳ್ಳುವಂತಹ ಸಂಪೂರ್ಣ ಪವಿತ್ರ ಭವ.

ತಂದೆ ಸಮಾನ ಆಗಲು ಪವಿತ್ರತೆಯ ತಳಪಾಯವನ್ನು ಶಕ್ತಿಶಾಲಿಯನ್ನಾಗಿ ಮಾಡಿಕೊಳ್ಳಿ. ತಳಪಾಯದಲ್ಲಿ ಬ್ರಹ್ಮಚರ್ಯವನ್ನು ಧಾರಣೆ ಮಾಡುವುದು ಇದಂತು ಸಾಮಾನ್ಯ ಮಾತಾಯಿತು, ಕೇವಲ ಇದರಲ್ಲಿಯೇ ಖುಶಿಯಾಗಬೇಡಿ. ದೃಷ್ಟಿ ವೃತ್ತಿಯ ಪವಿತ್ರತೆಗೆ ಇನ್ನೂ ಸಹ ಅಂಡಲ್ಲೈನ್ ಮಾಡಿ ಜೊತೆ-ಜೊತೆಯಲ್ಲಿ ತಮ್ಮ ಸಂಕಲ್ಪಗಳನ್ನು ಶುದ್ಧ, ಜ್ಞಾನ ಸ್ವರೂಪ, ಶಕ್ತಿ ಸ್ವರೂಪ ಮಾಡಿಕೊಳ್ಳಿ. ಸಂಕಲ್ಪದಲ್ಲಿ ಇನ್ನೂ ಬಹಳ ಬಲಹೀನತೆ ಇದೆ. ಈ ಬಲಹೀನತೆಯನ್ನೂ ಸಹ ಸಮಾಪ್ತಿ ಮಾಡಿ ಆಗ ಹೇಳಲಾಗುವುದು ಸಂಪೂರ್ಣ ಪವಿತ್ರ ಆತ್ಮ.

ಸ್ಲೋಗನ್: ದೃಷ್ಟಿಯಲ್ಲಿ ಎಲ್ಲರ ಪ್ರತಿ ದಯೆ ಮತ್ತು ಶುಭ ಭಾವನೆಯಿರಲಿ, ಆಗ ಅಭಿಮಾನ ಅಥವಾ ಅಪಮಾನದ ಅಂಶ ಸಹಾ ಬರಲು ಸಾಧ್ಯವಿಲ್ಲ.